# ಸೆಣಬು ತಯಾರಿಕೆಗಳ ಉಪ-ಕರ ಅಧಿನಿಯಮ, 1983

(1983ರ ಅಧಿನಿಯಮ ಸಂಖ್ಯೆ 28)

**[17-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 20ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 51 ಮತ್ತು 52ನೇ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಭಾರತದಲ್ಲಿ ಉತ್ಪಾದಿಸಲಾದ ಸೆಣಬು ತಯಾರಿಕೆಗಳ ಮೇಲೆ ಉಪ-ಕರ ವಿಧಿಸುವುದು ಮತ್ತು ಸಂಗ್ರಹಿಸುವುದು
4. ಶುಲ್ಕದ ಉತ್ಪತ್ತಿಯನ್ನು ಭಾರತ ಸಂಚಿತ ನಿಧಿಗೆ ಜಮೆ ಮಾಡುವುದು
5. ಮಾಹಿತಿಯನ್ನು ತರಿಸಿಕೊಳ್ಳುವ ಅಧಿಕಾರ
6. ನಿಯಮ ರಚನಾಧಿಕಾರ

ಅನುಸೂಚಿ.

# ಸೆಣಬು ತಯಾರಿಕೆಗಳ ಉಪ-ಕರ ಅಧಿನಿಯಮ, 1983

(1983ರ ಅಧಿನಿಯಮ ಸಂಖ್ಯೆ 28)

[7ನೇ ಸೆಪ್ಟೆಂಬರ್, 1983]

ಸೆಣಬು ತಯಾರಿಕೆಗಳ ಉತ್ಪಾದನಾ ಅಭಿವೃದ್ಧಿಗಾಗಿ ಮತ್ತು ಆ ಸಂಬಂಧದ ವಿಷಯಗಳಿಗಾಗಿ ಸೂಕ್ತ ಕ್ರಮಗಳನ್ನು ಪಾಲಿಸುವ ಉದ್ದೇಶದಿಂದ ಸೆಣಬು ತಯಾರಿಕೆಗಳ ಮೇಲೆ ಉತ್ಪಾದನಾ ಶುಲ್ಕವನ್ನು ಉಪ-ಕರದ ಮೂಲಕ ವಿಧಿಸುವ ಮತ್ತು ಸಂಗ್ರಹಿಸುವ ಬಗೆಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ನಾಲ್ಕನೆಯ ವರ್ಷದಲ್ಲಿ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಸೆಣಬು ತಯಾರಿಕೆಗಳ ಉಪ-ಕರ ಅಧಿನಿಯಮ, 1983 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ರಾಜಪತ್ರದಲ್ಲಿ ಗೊತ್ತುಪಡಿಸಬಹುದಾದ ದಿನಾಂಕದಂದು ಇದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸೆಣಬು ತಯಾರಿಕೆ" ಎಂದರೆ ಒಟ್ಟು ನಾರಿನ ತೂಕದ ಶೇಕಡಾ ಐವತ್ತಕ್ಕಿಂತ ಹೆಚ್ಚು (ಬಿಂಮ್ಲಿ ಪಟಮ್ ಸೆಣಬು ಅಥವಾ ಯಾವುದೇ ಬಗೆಯ ಮೆಸ್ಟನಾರು ಸೇರಿ) ಸೆಣಬನ್ನು ಒಳಗೊಂಡಿರುವ ಮತ್ತು ಅದರ ಉತ್ಪಾದನಾ ಸಂಸ್ಕರಣವು ಸಾಮಾನ್ಯವಾಗಿ ವಿದ್ಯುತ್ ನೆರವಿನಿಂದ ನಡೆಯುವ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಸ್ತು;

**ವಿವರಣೆ:-** "ಶಕ್ತಿ" ಎಂದರೆ ಯಾಂತ್ರಿಕವಾಗಿ ವರ್ಗಾಯಿಸಲ್ಪಡುವ ಮತ್ತು ಮಾನವ ಅಥವಾ ಪ್ರಾಣಿ ಶಕ್ತಿಯಿಂದ ಉತ್ಪಾದಿಸಲಾಗದ ವಿದ್ಯುಚ್ಛಕ್ತಿ ಅಥವಾ ಶಕ್ತಿಯ ಯಾವುದೇ ಇತರ ಪ್ರಕಾರ;

(ಬಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಂದ ನಿಯಮಿಸಲಾದುದು;

(ಸಿ) ಸೆಣಬು ತಯಾರಿಕೆಗೆ ಸಂಬಂಧಿಸಿದಂತೆ, "ಉತ್ಪಾದಕ" ಎಂದರೆ ಅಂಥ ಸೆಣಬು ತಯಾರಿಕೆಯ ಉತ್ಪಾದಕ.

**3. ಭಾರತದಲ್ಲಿ ಉತ್ಪಾದಿಸಲಾದ ಸೆಣಬು ತಯಾರಿಕೆಗಳ ಮೇಲೆ ಉಪಕರ ವಿಧಿಸುವುದು ಮತ್ತು ಸಂಗ್ರಹಿಸುವುದು.-** (1) ಸೆಣಬು ತಯಾರಿಕೆಗಳ ಅಭಿವೃದ್ಧಿ ಪರಿಷತ್ತು ಅಧಿನಿಯಮ, 1983ರ ಉದ್ದೇಶಗಳಿಗಾಗಿ, ಅನುಸೂಚಿಯ 3ನೇ ಆಂಕಣದಲ್ಲಿ ನಿರ್ದಿಷ್ಟಪಡಿಸಿದ ಮತ್ತು ಭಾರತದಲ್ಲಿ ಉತ್ಪಾದಿಸಿದ ಸೆಣಬು ತಯಾರಿಕೆಯ ಪ್ರತಿಯೊಂದು ವಸ್ತುವಿನ ಮೇಲೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ, ಅದರ 3ನೇ ಅಂಕಣದಲ್ಲಿನ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ದರವನ್ನು ಮೀರದಂಥ ದರದಲ್ಲಿ ಉತ್ಪಾದನಾ ಶುಲ್ಕವನ್ನು ಉಪಕರದ ರೂಪದಲ್ಲಿ ವಿಧಿಸತಕ್ಕುದು ಮತ್ತು ಸಂಗ್ರಹಿಸತಕ್ಕುದು:

ಪರಂತು, ಕೇಂದ್ರ ಸರ್ಕಾರವು ಅಂಥ ದರವನ್ನು ನಿರ್ದಿಷ್ಟಪಡಿಸುವವರೆಗೆ, ಅನುಸೂಚಿಯ 4ನೇ ಅಂಕಣದಲ್ಲಿನ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಉತ್ಪಾದನಾ ಶುಲ್ಕವನ್ನು ವಿಧಿಸತಕ್ಕುದು ಮತ್ತು ಸಂಗ್ರಹಿಸಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಿದ ಉತ್ಪಾದನಾ ಶುಲ್ಕವು, ಕೇಂದ್ರ ಉತ್ಪಾದನಾ ಶುಲ್ಕ ಮತ್ತು ಉಪ್ಪು ಅಧಿನಿಯಮ, 1944 (1944ರ 1) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ

ಇತರ ಕಾನೂನಿನ ಮೇರೆಗೆ ಸೆಣಬು ತಯಾರಕರ ಮೇಲೆ ವಿಧಿಸತಕ್ಕ ಅಬ್ಕಾರಿ ಶುಲ್ಕದ ಜೊತೆಗೆ ವಿಧಿಸುವಂತಹುದು ಆಗಿರತಕ್ಕುದು.

(3) (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಿದ ಉತ್ಪಾದನಾ ಶುಲ್ಕವು ಸೆಣಬು ತಯಾರಿಕೆ ಉತ್ಪಾದಕನಿಂದ ಸಂದಾಯವಾಗುವಂಥದ್ದಾಗಿರತಕ್ಕುದು.

(4) ಕೇಂದ್ರ ಉತ್ಪಾದನಾ ಶುಲ್ಕ ಮತ್ತು ಉಪ್ಪು ಅಧಿನಿಯಮ, 1944 (1944ರ 1) ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳನ್ನು ಶುಲ್ಕದ ಮರುಪಾವತಿ ಮತ್ತು ಅದರಿಂದ ವಿನಾಯತಿಗಳಿಗೆ ಸಂಬಂಧಿಸಿದವುಗಳೂ ಸೇರಿದಂತೆ, ಆದಷ್ಟು ಮಟ್ಟಿಗೆ ಈ ಅಧಿನಿಯಮದ ಮೇರೆಗೆ ಸೆಣಬು ತಯಾರಿಕೆಗಳ ಮೇಲಿನ ಉತ್ಪಾದನಾ ಶುಲ್ಕವನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಅನ್ವಯಿಸತಕ್ಕುದು.

**4. ಶುಲ್ಕದ ಉತ್ಪತ್ತಿಯನ್ನು ಭಾರತ ಸಂಚಿತ ನಿಧಿಗೆ ಜಮೆ ಮಾಡುವುದು.**- 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಲಾದ ಉತ್ಪಾದನಾ ಶುಲ್ಕದ ಉತ್ಪನ್ನವನ್ನು, ಮೊದಲನೆಯದಾಗಿ ಭಾರತ ಸಂಚಿತ ನಿಧಿಗೆ ಜಮೆ ಮಾಡತಕ್ಕುದು ಮತ್ತು ಕೇಂದ್ರ ಸರ್ಕಾರವು, ಸಂಸತ್ತು, ಈ ಸಂಬಂಧದಲ್ಲಿ ಕಾನೂನಿನ ಮೂಲಕ ಮಾಡಿದ ವಿನಿಯೋಗದಿಂದ, ಹಾಗೆ ಉಪಬಂಧಿಸಿದಲ್ಲಿ, ಸೆಣಬು ತಯಾರಿಕೆಗಳ ಅಭಿವೃದ್ಧಿ ಪರಿಷತ್ತು ಅಧಿನಿಯಮ, 1983ರ ಉದ್ದೇಶಗಳಿಗೆ ಬಳಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ಹಣದ ಮೊತ್ತವನ್ನು, ಅಂಥ ಉತ್ಪತ್ತಿಯಿಂದ (ಅಂಥ ಉತ್ಪತ್ತಿಯ ಶೇಕಡಾ ನಾಲ್ಕರಷ್ಟನ್ನು ಮೀರದ ಸಂಗ್ರಹಣಾ ವೆಚ್ಚವನ್ನು ಕಳೆದ ನಂತರ) ಕಾಲಕಾಲಕ್ಕೆ ಸೆಣಬು ತಯಾರಿಕೆಗಳ ಅಭಿವೃದ್ಧಿ ಪರಿಷತ್ತಿಗೆ ಸಂದಾಯ ಮಾಡಬಹುದು.

**5. ಮಾಹಿತಿಯನ್ನು ತರಿಸಿಕೊಳ್ಳುವ ಅಧಿಕಾರ.**- ಈ ಅಧಿನಿಯಮದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಯೊಳಗೆ ಮತ್ತು ಅಂಥ ಅಂಕಿ ಅಂಶಗಳು ಮತ್ತು ಯಾವುದೇ ಇತರ ಮಾಹಿತಿಯನ್ನು ಒದಗಿಸಲು ಸೆಣಬು ತಯಾರಿಕೆಯ ಉತ್ಪಾದಕನನ್ನು ಅಗತ್ಯಪಡಿಸಬಹುದು.

**6. ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, 5ನೇ ಪ್ರಕರಣದ ಮೇರೆಗೆ ಅಂಕಿಅಂಶಗಳು ಮತ್ತು ಇತರ ಮಾಹಿತಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಅವಧಿಯೊಳಗೆ ಒದಗಿಸಬೇಕೆಂಬ ಬಗ್ಗೆ ಅಂಥ ನಿಯಮಗಳು ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಆಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕುದು ಮತ್ತು ಅದನ್ನು ಹಾಗೆ ಇರಿಸಿದ ಅಧಿವೇಶನವು ಅಥವಾ ಅದಕ್ಕೆ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದರೆ ಅಂಥ ಯಾವುದೇ ಮಾರ್ಪಾಡು ಅಥವಾ ಶೂನ್ಯತೆಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕುದು.

**ಅನುಸೂಚಿ**

**[2 (ಎ) ಮತ್ತು 3(1) ಪ್ರಕರಣಗಳನ್ನು ನೋಡಿ]**

| ಕ್ರಮ ಸಂಖ್ಯೆ | ಸೆಣಬು ತಯಾರಿಕೆಯ ವಸ್ತುಗಳು | ಉತ್ಪಾದನಾ ಶುಲ್ಕವನ್ನು ಸಂಗ್ರಹಿಸಬಹುದಾದ ಗರಿಷ್ಠ ದರ | ಕೇಂದ್ರ ಸರ್ಕಾರವು ಬೇರೆ ದರವನ್ನು ನಿರ್ದಿಷ್ಟಪಡಿಸುವವರೆಗೆಶುಲ್ಕದ ಸಂಗ್ರಹಿಸಬೇಕಾದ ಉತ್ಪಾದನಾ ವಾಸ್ತವ ದರ. |
|---|---|---|---|
| **1** | **2** | **3** | **4** |
| 1. | ಕಾರ್ಪೆಟ್ ಬ್ಯಾಕಿಂಗ್ | ಪ್ರತಿ ಟನ್ನಿಗೆ 195 ರೂ. | ಪ್ರತಿ ಟನ್ನಿಗೆ 65.00 ರೂ. |
| 2. | ಸೆಣಬಿನ ಒರಟು ಗಟ್ಟಿ ಬಟ್ಟೆ | ಪ್ರತಿ ಟನ್ನಿಗೆ 209 ರೂ. | ಪ್ರತಿ ಟನ್ನಿಗೆ 69.65 ರೂ. |
| 3. | ಗೋಣಿಯ ಬಟ್ಟೆ | ಪ್ರತಿ ಟನ್ನಿಗೆ 158 ರೂ. | ಪ್ರತಿ ಟನ್ನಿಗೆ 52.65 ರೂ. |
| 4. | ನೂಲು ಮತ್ತು ಹುರಿ | ಪ್ರತಿ ಟನ್ನಿಗೆ 197 ರೂ. | ಪ್ರತಿ ಟನ್ನಿಗೆ 65.65 ರೂ. |
| 5. | ಡಿ.ಡಬ್ಲ್ಯೂ. ಟಾರ್‌ಪಾಲಿನ್ | ಪ್ರತಿ ಟನ್ನಿಗೆ 198 ರೂ. | ಪ್ರತಿ ಟನ್ನಿಗೆ 66.00 ರೂ. |
| 6. | ಅಲಂಕಾರಿಕ ವಸ್ತ್ರಗಳು | ಪ್ರತಿ ಟನ್ನಿಗೆ 457 ರೂ. | ಪ್ರತಿ ಟನ್ನಿಗೆ 152.35 ರೂ. |
| 7. | ಹತ್ತಿ ಚೀಲದ ಬಟ್ಟೆ | ಪ್ರತಿ ಟನ್ನಿಗೆ 110 ರೂ. | ಪ್ರತಿ ಟನ್ನಿಗೆ 36.65 ರೂ. |
| 8. | ಮಣ್ಣಿನ ರಕ್ಷಕ | ಪ್ರತಿ ಟನ್ನಿಗೆ 115 ರೂ. | ಪ್ರತಿ ಟನ್ನಿಗೆ 38.35 ರೂ. |
| 9. | ಜಪಾನಿ ಅಕ್ಕಿ ಚೀಲಗಳು | ಪ್ರತಿ ಟನ್ನಿಗೆ 205 ರೂ. | ಪ್ರತಿ ಟನ್ನಿಗೆ 68.35 ರೂ. |
| 10. | ಸೆಣಬು ತಯಾರಿಕೆಯ ಯಾವುದೇ ಇತರ ವಸ್ತು | ಪ್ರತಿ ಟನ್ನಿಗೆ 184 ರೂ. | ಪ್ರತಿ ಟನ್ನಿಗೆ 61.35 ರೂ. |

* * * *